ಬದುಕು ಬದಲಿಸಿದ

# ಭಾವೇಶ್ ಭಾಟಿಯಾ

## ಅಂಧ ಉದ್ಯೋಗ ಜನಕನ ಸಾಹಸಗಾಥೆ

■ ನೇಮಿಚಂದ್ರ

ಕಲೆ: ಮನೋಹರ ಕೆ. ಆಚಾರ್ಯ



## ದುರ್ಗಮ ಹಾದಿಯ ತುದಿಗೆ ಸಂತಸದ ಚಿಲುಮೆ

ಪಟ್ನಾದಲ್ಲಿನ ಬಿ.ಎಸ್.ಎ. ಕಂಪನಿಯ ಡಿಪೋದ ಮ್ಯಾನೇಜರ್, ಸೈಕಲ್ ಯಾತ್ರೆ ಕೈಗೊಂಡ ಯುವಕರ ಬಗ್ಗೆ ವಿಶೇಷ ಕಾಳಜಿ ತೋರಿಸಿದ. ಡಿಪೋ ಮ್ಯಾನೇಜರ್ ಅವರಿಗೆ ಹೊಸ ಸೈಕಲ್ ಕೊಟ್ಟಿದ್ದಲ್ಲದೆ, ಎರಡೆರಡು ಲೈನರ್, ಟ್ಯೂಬ್ ಮತ್ತು ಪೌಷ್ಟಿಕ ಆಹಾರವಾಗಿ ತಿನ್ನಲು ಡ್ರೈಫ್ರೂಟ್ಸ್ ಕೊಟ್ಟರು. ಇದಲ್ಲದೆ, 5000 ರೂಪಾಯಿಗಳನ್ನೂ ಅವರ ಪ್ರವಾಸಕ್ಕೆ ನೀಡಿದರು. ಗೋಂದಿಯಾದಲ್ಲಿ ಎಷ್ಟು ಸಂಭ್ರಮದ ವಿದಾಯ ಪಡೆದಿದ್ದರೋ, ಪಟ್ನಾ ನಗರದ ಈ ಸೈಕಲ್ ಡಿಪೋನಿಂದ ಅಷ್ಟೇ ಸಂತಸದ ವಿದಾಯ ಅವರಿಗೆ ಕಾದಿತ್ತು.

ಭಾವೇಶ ಉದ್ಯಮದ ಪಾಠಗಳನ್ನಷ್ಟೇ ಅಲ್ಲ, ಬದುಕಿನ ಬಲು ದೊಡ್ಡ ಪಾಠಗಳನ್ನು ಕಲಿಯುತ್ತಿದ್ದರು. ಮತ್ತೆ ಅನುಭವಕ್ಕೆ ಬಂದಿತ್ತು – ಯಾವುದೂ ಸಮಸ್ಯೆಯಲ್ಲ, ಎಲ್ಲವೂ ಸವಾಲು. ಎದುರಾಗುವ ಅಡೆತಡೆಗೆ ಕುಸಿದು ಖಿನ್ನರಾಗಬೇಕಿಲ್ಲ. ಪ್ರತಿ ಘಟನೆಯೂ ಹೊಸ ಅವಕಾಶಗಳಿಗೆ ಬಾಗಿಲು ತೆರೆಯಬಲ್ಲದು. ದುರದೃಷ್ಟ ಎಂಬುದಿಲ್ಲ. ಆತ್ಮವಿಶ್ವಾಸವನ್ನು ಕಳೆದುಕೊಳ್ಳದೆ ತಮ್ಮ ಕಾರ್ಯದಲ್ಲಿ ಬಿಡದೆ ನಡೆದರೆ, ಬದುಕು ಅದೃಷ್ಟದ ನೂರು ಬಾಗಿಲುಗಳನ್ನು ತೆರೆಯುತ್ತದೆ. ಪಟ್ನಾದ ಅನುಭವ ಈ ಮೂವರು ಯುವಕರಿಗೆ ಹೊಸ ಹುರುಪನ್ನು ನೀಡಿತ್ತು. ಮುಂದಿನ ಹಾದಿಯ ಸಾಹಸಕ್ಕೆ ಸಿದ್ಧವಾಗಿ ಹೊರಟರು.

ಪಟ್ನಾದಿಂದ ಹೊರಟ ಮೇಲೆ ಮುಜ್ಫರ್ಪುರ್, ಮೋತೀಹಾರಿ ದಾಟಿ ರಕ್ಸೌಲ್ ಸರಹದ್ದನ್ನು ತಲುಪಿದರು. ಭಾರತನೇಪಾಳದ ನಡುವಿನ ಈ ಸರಹದ್ದಿನಲ್ಲಿ ಸೀಮಾ ಸುರಕ್ಷಾ ದಳದ ಯೋಧರು ಇವರನ್ನು ಸ್ವಾಗತಿಸಿದರು. ಚಹಾ ಕುಡಿಸಿದ್ದಲ್ಲದೆ ಹೊಸ ಚಪ್ಪಲಿಗಳನ್ನು ಉಡುಗೊರೆಯಾಗಿ ನೀಡಿದರು. ಆ ಭವ್ಯ ದ್ವಾರದ ಮೂಲಕ ಹಾದು ಭಾವೇಶ್ ಮತ್ತು ಗೆಳೆಯರು ನೇಪಾಳದ ನೆಲಕ್ಕೆ ಕಾಲಿಟ್ಟರು. ತಮ್ಮ ಎಳೆಯ ಬದುಕಿನಲ್ಲಿ ಮೊಟ್ಟ ಮೊದಲ ಬಾರಿಗೆ ವಿದೇಶದ ನೆಲದಲ್ಲಿ ಪಾದಾರ್ಪಣೆ ಮಾಡಿದ್ದರು. ಆದರೆ ಅಂತಹ ವ್ಯತ್ಯಾಸವೇನೂ ಅವರಿಗೆ ಕಾಣಲಿಲ್ಲ. ಭಾಷೆಯ ಅಡಚಣೆಯೂ ಇರಲಿಲ್ಲ. ಜನರೂ ಕೂಡಾ ತಮ್ಮವರೆಂದೇ ಅನಿಸುತ್ತಿತ್ತು. ಮನುಷ್ಯ ಮನುಷ್ಯನ ನಡುವೆ ಸರಹದ್ದುಗಳಿಲ್ಲ.

ಅಲ್ಲಿ ಅವರಿಗೆ ಒಂದು ವಿದೇಶಿ ಸೈಕಲ್ ತಂಡದ ಭೆಟ್ಟಿ ಆಯಿತು. ಆ ತಂಡ ಕೆಲವು ವರ್ಷಗಳ ಹಿಂದೆ ಯೂರೋಪಿನಿಂದ ಸೈಕಲ್ ಮೇಲೆ ಹೊರಟು, ನೇಪಾಳ ತಲುಪಿತ್ತು. ಅವರು ತಮ್ಮ ಯಾತ್ರೆಯ ಅನುಭವವನ್ನು ಹಂಚಿಕೊಂಡರು. ಅವರು ತಮ್ಮ ಪಯಣದ ಅನುಭವಗಳನ್ನು ಅವರಿಗೆ ತಿಳಿಸಿದರು. ಅವರು ಇವರ ಸೈಕಲ್ ತುಳಿದು ನೋಡಿದರು. ಇವರು ಅವರ ವಿದೇಶಿ ಸೈಕಲ್ ಓಡಿಸಿ ನೋಡಿದರು. ಅವರೊಡನೆ ಮಾತನಾಡುವುದು ಕೊಂಚ ಕಷ್ಟವಿತ್ತು. ಕಾರಣ ಮೂವರು ಗೆಳೆಯರಿಗೂ ಇಂಗ್ಲಿಷ್ ಭಾಷೆಯಲ್ಲಿ ಸರಾಗವಾಗಿ ಮಾತನಾಡಲು ಬರುತ್ತಿರಲಿಲ್ಲ. ಆದರೆ ಅವರು ಹೇಳಿದ್ದು ಅರ್ಥವಾಗುತ್ತಿತ್ತು. ಆ ವಿದೇಶೀಯರಿಗೆ ಒಂದಿಷ್ಟು ಹಿಂದಿ ಅರ್ಥವಾಗುತ್ತಿತ್ತು. ಅಷ್ಟರಲ್ಲೆ